# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 04–10–2017

## ಪ್ರಕಟಣೆಯ ಕೃಪೆಗಾಗಿ

**ರಾಜೇಂದ್ರ ಶ್ರೀಗಳವರ ಜಯಂತಿ ಅಂಗವಾಗಿ ಅಂತರ ಕಾಲೇಜು ಸಾಂಸ್ಕೃತಿಕ ಮತ್ತು ಕ್ರೀಡಾ ಕೂಟ**

ಕೊಳ್ಳೇಗಾಲ 04–10–2017 : ಸರಳತೆ ಹಾಗೂ ಸಮಾಜಮುಖಿ ಚಿಂತನೆಗಳಿಂದ ಇಡೀ ನಾಡಿನ ಹೃನ್ಮನವನ್ನು ಗೆದ್ದು, ಇಡೀ ಜಗದ ದೃಷ್ಠಿ ತಮ್ಮತ್ತ ಬೀಳುವಂತೆ ಸಾರ್ಥಕತೆ ಮೆರೆದವರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಎಂದು ಎ.ಪಿ.ಎಸ್ ಪ್ಯಾರಡೈಸ್ ಮಾಲೀಕರು ಹಾಗೂ ಇಲ್ಲಿನ ಆರ್ಯ ವೈಶ್ಯ ಸಂಘದ ಅಧ್ಯಕ್ಷರಾದ ಶ್ರೀ ಎ ಡಿ ಕುಮಾರ್ ಕೃಷ್ಣ ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿಯವರ 102ನೆಯ ಜಯಂತಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಅಂತರ ಕಾಲೇಜು ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಲಕ್ಷಾಂತರ ಬಡಮಕ್ಕಳಿಗೆ ಉಚಿತವಾಗಿ ಶಿಕ್ಷಣ, ಊಟ, ವಸತಿ ಕಲ್ಪಿಸಿ ಜ್ಞಾನವಂಚಿತರಾಗಿ ಉಳಿಯುತ್ತಿದ್ದ ಅನೇಕಾನೇಕ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ, ಸಮಾಜದಲ್ಲಿ ಅವರು ಉನ್ನತ ಸ್ಥಾನ ಅಲಂಕರಿಸುವಂತೆ ಮಾಡಿದ ಇವರು ಮಠಾಧೀಶರ ಸಾಲಿನಲ್ಲಿ ಅಗ್ರ ಪಂಕ್ತಿಯಲ್ಲಿ ಇದ್ದಾರೆ. ಇಂತಹವರ ಸ್ಮರಣಾರ್ಥ ಈ ಕಾಲೇಜಿನವರು ವಿವಿಧ ರೀತಿಯ ಸ್ಪರ್ಧೆಗಳನ್ನು ಪ್ರತೀ ವರ್ಷ ಆಚರಿಸುತ್ತಿರುವುದು ಸಂತಸದ ವಿಷಯ. ಇವುಗಳ ಪೈಕಿ ಒಂದಾದ ಪ್ರತಿಭಾ ಪುರಸ್ಕಾರದಲ್ಲಿ ನನ್ನ ತಂದೆಯ ಹೆಸರಿನಲ್ಲಿ ನಾನೂ ಕೂಡ ಪಾಲ್ಗೊಳುತ್ತಿರುವುದು ನನ್ನ ಪೂರ್ವ ಜನ್ಮದ ಪುಣ್ಯ ಎಂದು ನಾನು ಭಾವಿಸುತ್ತೇನೆ. ಪ್ರಶಸ್ತಿ ಬಹುಮಾನ ಹಾಗೂ ಗೌರವಗಳನ್ನು ನಾವು ಹುಡುಕಿಕೊಂಡು ಹೋಗುವ ಬದಲು ಅವುಗಳು ನಮ್ಮನ್ನು ಅರಸಿ ಬರುವಂತಾಗಬೇಕು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯ ಪ್ರೊ. ಉಮೇಶ ಎಲ್ಲರನ್ನೂ ತನ್ನವರಂತೆ ಕಾಣುವ ಮಹಾಮಾನವೀಯತೆ ಶ್ರೀಗಳವರಲ್ಲಿತ್ತು. ಅವರು ಸ್ಥಾಪಿಸಿರುವ ವಿದ್ಯಾರ್ಥಿನಿಲಯಗಳೇ ಅದಕ್ಕೆ ಸಾಕ್ಷಿ. ಎಂಥ ವಿಷಮ ಪರಿಸ್ಥಿತಿಯಲ್ಲಿಯೂ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಗುರುದೇವರಾಗಿ ಕಾಪಾಡುತ್ತಿದ್ದರವರು ನೊಂದವರ ಮುಖದಲ್ಲಿ ಸಂತಸ ಮೂಡಿಸುವುದೇ ಪ್ರಸಾದವೆಂದು ನಂಬಿದ್ದವರು. ''ನಂಬಿ ಬಂದವರಿಗೆ ಕಲಿಯುಗದ ಕಾಮಧೇನು, ಬೇಡಿ ಬಂದವರಿಗೆ ಕೈ ಬಿಡದ ಕಲ್ಪವೃಕ್ಷ'' ಎಂದು ಜನರಿಂದ ಕರೆಸಿಕೊಂಡವರು. ಇಂತಹ ಮಹಾಚೇತನರ ಜಯಂತಿ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಉದ್ದೇಶದಿಂದ ಪ್ರತೀ ವರ್ಷ ನಾವು ಈ ರೀತಿಯ ವಿವಿಧ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದೇವೆ ಎಂದು ತಿಳಿಸಿದರು.

ಶುಶ್ರೂಷ ಶಾಲೆ ಪ್ರಾಚಾರ್ಯರಾದ ಶ್ರೀ ವಿಷಕಂಠಮೂರ್ತಿ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀ ಮಹದೇವಸ್ವಾಮಿ ಹಾಗೂ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ ಪ್ರಭುರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಅಂಜನ ಸ್ವಾಗತಿಸಿದರು ಕು. ಅನುಪಮಾ ವಂದಿಸಿದರು.




ಲಿಂಗೈಕ್ಯ ಜಗದ್ಗುರು ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ
102ನೆಯ ಜಯಂತಿ ಮಹೋತ್ಸವದ ಅಂಗವಾಗಿ
ಕೊಳ್ಳೇಗಾಲ ತಾಲ್ಲೂಕು ಅಂತರ ಕಾಲೇಜು ಮಟ್ಟದ
ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆಗಳು
ಜೆ ಎಸ್ ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

